ಜೆಎಸ್ಎಸ್ ಮಹಾವಿದ್ಯಾಪೀಠ

**ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

'ಉತ್ಕೃಷ್ಟತಾ ಅಂತಃಸಾಮರ್ಥ್ಯ ಉಳ್ಳ' ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ಊಟಿರಸ್ತೆ, ಮೈಸೂರು-570 025, ಕರ್ನಾಟಕ

GOLDEN JUBILEE
JSS COLLEGE OF ARTS, COMMERCE & SCIENCE
OOTY ROAD, MYSORE

1916 H.H. Jagadguru Dr. Sri Shivarathri Rajendra Mahaswamiji 2015
Centenary Celebrations

☎ 0821-2548236 & 2548380 Fax: 0821-2548238 E-mail: jssautonomous@gmail.com

ದಿನಾಂಕ: 25.01.2016

# <u>ಪ್ರಕಟಣೆ ಕೃಪೆಗಾಗಿ</u>

# ಸುವರ್ಣಮಹೋತ್ಸವ ಉಪನ್ಯಾಸ

ಕಾಲೇಜಿನ ಸುವರ್ಣ ಮಹೋತ್ಸವದ ಅಂಗವಾಗಿ **ಭೂಗೋಳಶಾಸ್ತ್ರ ವಿಭಾಗದ** ವತಿಯಿಂದ 21-01-2016ರಂದು ನಗರದ ಊಟಿರಸ್ತೆಯ ಜೆಎಸ್ಎಸ್ ಕಾಲೇಜಿನ ಸುವರ್ಣ ಮಹೋತ್ಸವದ ಭವನದಲ್ಲಿ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಬೆಂಗಳೂರು ವಿಶ್ವವಿದ್ಯಾಲಯದ ಭೂಗೋಳಶಾಸ್ತ್ರ ವಿಭಾಗದ ನಿವೃತ್ತ ಮುಖ್ಯಸ್ಥರಾದ ಡಾ. ಬಿ ಈಶ್ವರಪ್ಪನವರು – "ವಾಯುಗುಣ ಬದಲಾವಣೆಯಲ್ಲಿ ಆಧುನಿಕ ಮಾನವನ ಪಾತ್ರ" ಎಂಬ ವಿಷಯವನ್ನು ಕುರಿತು ವಿದ್ಯಾರ್ಥಿಗಳಿಗೆ ಉಪನ್ಯಾಸನೀಡಿದರು.

ಶ್ರೀಯುತರು ತಮ್ಮ ಉಪನ್ಯಾಸದಲ್ಲಿ ವಾಯುಗುಣ ಬದಲಾವಣೆ ಎಂದರೇನು? ಇಂದು ವಾಯುಗುಣ ಬದಲಾವಣೆಯಲ್ಲಿ ಆಧುನಿಕ ಮಾನವನ ಪಾತ್ರದ ಬಗ್ಗೆ ಮಾತನಾಡುತ್ತಾ, ಇಂದಿನ ಮಾನವ ತನ್ನ ಐಷಾರಾಮಿ ಬದುಕಿನಿಂದ ವಾತಾವರಣದಲ್ಲಿ ಇಂಗಾಲದ ಹೆಚ್ಚಳ, ಆ ಮೂಲಕ ಜಾಗತಿಕ ತಾಪಮಾನದ ಹೆಚ್ಚಳಕ್ಕೆ ಹೇಗೆ ಕಾರಣನಾಗಿದ್ದಾನೆ ಎಂಬುದನ್ನು ಹಲವು ಉದಾಹರಣೆಗಳ ಮೂಲಕ ವಿವರಿಸಿದರು, ಮುಂದುವರಿದು ವಾಯುಗುಣ ಬದಲಾವಣೆಯಿಂದ ಉಂಟಾಗುವ ಸಮಸ್ಯೆಗಳನ್ನು ತಿಳಿಸುತ್ತಾ ಅದಕ್ಕೆ ಸಂಬಧಿಸಿದಂತೆ ಪ್ರಪಂಚದ ವಿವಿಧ ಭಾಗಗಳಲ್ಲಿ ನಡೆದ ಜಾಗತಿಕ ಭೂ ಸಮ್ಮೇಳನಗಳಲ್ಲಿ ಕೈಗೊಂಡ ನಿರ್ಣಯಗಳನ್ನು ವಿದ್ಯಾರ್ಥಿಗಳಿಗೆ ಮನವರಿಕೆಮಾಡಿದರು ಜೊತೆಗೆ ಪ್ರಸ್ತುತ ವಿದ್ಯಾವಂತರಾದ ನಾವೆಲ್ಲರೂ ಹೇಗೆ ಸ್ವಚ್ಛ ಭಾರತದ ಅಭಿಯಾನದಲ್ಲಿ ತೊಡಗಿಕೊಂಡು ಭವ್ಯ ಭಾರತ ನಿರ್ಮಾಣ ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಬೇಕೆಂದು ತಿಳಿಸಿದರು.

ಪ್ರಾಂಶುಪಾಲರಾದ ಪ್ರೊ.ಎಂ.ಮಹದೇವಪ್ಪರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸುವರ್ಣ ಮಹೋತ್ಸವ ಸಮಿತಿಯ ಕಾರ್ಯದರ್ಶಿಗಳಾದ ಪ್ರೊ.ಡಿ.ಎಸ್.ಸದಾಶಿವಮೂರ್ತಿಯವರು ಉಪಸ್ಥಿತರಿದ್ದರು. ಕುಮಾರಿ ಪೂರ್ಣಿಮಾ ಎ.ಎಸ್ ಪ್ರಾರ್ಥಿಸಿದರು. ಪ್ರೊ.ಪಿ.ಎಂ.ಮಹದೇವಸ್ವಾಮಿಯವರು ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ರಾಜೇಂದ್ರರವರು ವಂದಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಕೆ.ಆರ್.ಸತೀಶ ರವರು ನಿರೂಪಿಸಿದರು.

ಗೆ
ಸಂಪಾದಕರು

--------------ದಿನ ಪತ್ರಿಕೆ

(ಪ್ರೊ ಎಂ ಮಹದೇವಪ್ಪ)
**ಪ್ರಾಚಾರ್ಯರು**
**ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
**(ಸ್ವಾಯತ್ತ)**
**ಊಟಿ ರಸ್ತೆ, ಮೈಸೂರು-570 025.**